# ಕರ್ನಾಟಕ ಸರ್ಕಾರ

ಸಂಖ್ಯೆ: UDD 397 MNU 2023

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ, 4ನೇ ಮಹಡಿ
ಬೆಂಗಳೂರು, ದಿನಾಂಕ: 06.11.2023

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
ವಿಕಾಸಸೌಧ

**ಇವರಿಗೆ:**
ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೆ,

**ವಿಷಯ:** ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ C.F.E & C.F.O ನೀಡುವಲ್ಲಿ ವಿಳಂಬವಾಗುತ್ತಿರುವ ಹಿನ್ನಲೆಯಲ್ಲಿ ಪಾಲಿಕೆಯ ಕಟ್ಟಡ ನಕ್ಷೆ ಮಂಜೂರಾತಿ ನೀಡುವಲ್ಲಿ ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ ಮಾರ್ಗದರ್ಶನ ಕೋರಿರುವ ಬಗ್ಗೆ.

**ಉಲ್ಲೇಖ:**
1. ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಮಾ.ಮು.ಆ/ಪಿಆರ್/(G)/1732/23-24, ದಿನಾಂಕ 11.10.2023.
2. ಸರ್ಕಾರದ ಅ.ಸ. ಪತ್ರ ಸಂಖ್ಯೆ: ನಅಇ 105 ಅಮುಕಾ 2023, ದಿನಾಂಕ 18.10.2023.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಪತ್ರದ ಅಂಶಗಳ ಬಗ್ಗೆ ತಮ್ಮ ಗಮನ ಸೆಳೆಯಲಾಗಿದೆ. ಈ ಸಂಬಂಧ ಅಗತ್ಯ ಪರತ್ತುಗಳೊಂದಿಗೆ ತಾತ್ಕಾಲಿಕ C.F.E & C.F.O ಗಳನ್ನು ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ನೀಡಿದ್ದಾದಲ್ಲಿ ಅದನ್ನು ಆಧರಿಸಿ ನಕ್ಷೆ ಮಂಜೂರಾತಿ ಮತ್ತು ಸ್ವಾಧೀನಾನುಭವ ಪತ್ರಗಳನ್ನು ನೀಡಲು ಸಾಧ್ಯವಾಗುತ್ತಿದ್ದು, ಬಳಿಕ ಮಂಡಳಿಯು ಪೂರ್ಣ ಪ್ರಮಾಣದ C.F.E & C.F.O ಗಳನ್ನು ನೀಡಲು ಕ್ರಮವಹಿಸಬಹುದಾಗಿದ್ದು, ಈ ಬಗ್ಗೆ ಕೂಡಲೇ ಕ್ರಮವಹಿಸುವಂತೆ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಮತ್ತು ಜೀವಿಶಾಸ್ತ್ರ ಇಲಾಖೆ ಇವರನ್ನು ಉಲ್ಲೇಖ (2) ರ ಪತ್ರದಲ್ಲಿ

ಕೋರಲಾಗಿದೆ. ಸದರಿಯವರಿಂದ ಈವರೆಗೂ ಯಾವುದೇ ಅಭಿಪ್ರಾಯವನ್ನು ಸ್ವೀಕರಿಸಿರುವುದಿಲ್ಲ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ಆಂತರಿಕ ವ್ಯಾಜ್ಯ / ದಾವೆ ಮುಂತಾದ ಕಾರಣಗಳಿಂದಾಗಿ C.F.E & C.F.O ಪಡೆಯುವುದು ಔಪಚಾರಿಕವಾಗಿ ಮಾತ್ರ ಬಾಕಿ ಇದ್ದಲ್ಲಿ, ಅರ್ಜಿದಾರರಿಂದ ಸೂಕ್ತ ಮುಚ್ಚಳಿಕೆ / ನಷ್ಟ ಪರಿಹಾರ (Indemnity bond) ಪಡೆದುಕೊಂಡು, case by case basis ಪರಿಶೀಲಿಸಿಕೊಂಡು ಕೆಳಕಂಡಂತೆ ಕ್ರಮ ಕೈಗೊಳ್ಳಲು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

(ಅ) ಒಂದು ವೇಳೆ ಕಟ್ಟಡ ನಕ್ಷೆಯು ಚಾಲ್ತಿಯಲ್ಲಿರುವ ನಿಯಮಾವಳಿಗಳಿಗೆ ಮತ್ತು ಕಟ್ಟಡ ಉಪವಿಧಿಗಳಿಗೆ ಅನುಗುಣವಾಗಿದ್ದಲ್ಲಿ, ಪಾಲಿಕೆಯು ಪ್ರಸ್ತಾಪಿಸಿರುವಂತೆ, ಪ್ರಾರಂಭಿಕ ಪ್ರಮಾಣ ಪತ್ರ ಪಡೆಯುವ ಸಮಯದಲ್ಲಿ C.F.E ಸಲ್ಲಿಸುವ ಷರತ್ತಿಗೊಳಪಟ್ಟು, ಷರತ್ತುಬದ್ಧ ನಕ್ಷೆ ಮಂಜೂರಾತಿಯನ್ನು ನೀಡಲು

ಮತ್ತು

(ಆ) ನಿರ್ಮಾಣ ಮಾಡಿರುವ ಕಟ್ಟಡವು ಚಾಲ್ತಿಯಲ್ಲಿರುವ ನಿಯಮಾವಳಿಗಳಿಗೆ ಮತ್ತು ಕಟ್ಟಡ ಉಪವಿಧಿಗಳಿಗೆ, ಪಾಲಿಕೆಯು ನೀಡಿರುವ ಅನುಮೋದನೆ ಹಾಗೂ ವಿಧಿಸಿರುವ ಷರತ್ತುಗಳಿಗೆ ಅನುಗುಣವಾಗಿದ್ದು, ಈ ಹಿಂದೆ ಕಟ್ಟಡ ನಿರ್ಮಾಣ ಅನುಮತಿ ನೀಡುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿಯವರಿಂದ C.F.E ಪಡೆದು STP ನಿರ್ಮಾಣ ಮಾಡಿ, C.F.O ಬಾಕಿ ಇದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಪಾಲಿಕೆಯು ಪ್ರಸ್ತಾಪಿಸಿರುವಂತೆ ಷರತ್ತುಬದ್ಧ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲು.

ತಮ್ಮ ನಂಬುಗೆಯ

(ಲಕ್ಷ್ಮೀಸಾಗರ್.ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ).

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

KARNATAKA STATE POLLUTION CONTROL BOARD

## Online Payment Receipt

| | |
|---|---|
| XGN_ID | 182615 |
| Name of the Organization | Residential Plotted Development Co Arvind Smarthomes Pvt Ltd |
| Correspondence Address | Kundana Hobli, Devanahalli Taluk, Bengaluru Rural District |
| Inward no | 202851 |
| Inward Type | CEF |
| Name of the Regional Office | Hoskote |
| Bank Reference Number | ZICO1531041829 |
| OrderId | 156707 |
| Date Of Payment | 13/11/2023 00:00:00 |
| Transaction Amount (In Rs.) | 75000.00 |
| Transaction Amount (In Words) | Seventy Five Thousand Rupees only |

16/11/23

ARVIND SMART HOMES PVT. LTD.